# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು). |
| ಪ್ರಶ್ನೆಯ ವಿಧ | : | ಚುಕ್ಕೆ ರಹಿತ ಪ್ರಶ್ನೆ. |
| ಪ್ರಶ್ನೆಸಂಖ್ಯೆ | : | 40 (125). |
| ಉತ್ತರಿಸಬೇಕಾದ ದಿನಾಂಕ | : | 17-08-2026 (ಕಾಲವಕಾಶ ಕೋರಿದ್ದ ಪ್ರಶ್ನೆ). |
| ವಿಷಯ | : | ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ಬಡ್ತಿಯ ಬಗ್ಗೆ. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳೆಷ್ಟು; ಅಂತಹ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ದೊರೆಯಬೇಕಾದ ಸ್ಥಾನಗಳೆಷ್ಟು;</td><td>
<table>
<tr><th rowspan="2">ಪ್ರಾಂಶುಪಾಲರ ವೃಂದದ ಹುದ್ದೆಗಳು</th><th colspan="3">ಮಂಜೂರಾದ ವೃಂದ ಬಲ</th></tr>
<tr><th>Total</th><th>DR</th><th>PR</th></tr>
<tr><td>1</td><td>2</td><td>3</td><td>4</td></tr>
<tr><td>ಕಲ್ಯಾಣ ಕರ್ನಾಟಕ ವೃಂದ (ಪ್ರಾದೇಶಿಕ ಕಚೇರಿ ಮತ್ತು ರಾಜ್ಯ ಮಟ್ಟದ ಕಚೇರಿ (ಬಿಬಿಎಂಪಿ ವ್ಯಾಪ್ತಿ) ಒಳಗೊಂಡಂತೆ)</td><td>169</td><td>42</td><td>127</td></tr>
<tr><td>ಉಳಿಕೆ ವೃಂದ</td><td>1056</td><td>264</td><td>792</td></tr>
<tr><td>ಒಟ್ಟು</td><td>1225</td><td>306</td><td>919</td></tr>
</table>
ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997 ದಿನಾಂಕ: 03.02.1999ರನ್ವಯ ಬಡ್ತಿ ಕೋಟಾದ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಪರಿಶಿಷ್ಟ ಜಾತಿಗೆ 20 ಮತ್ತು ಪರಿಶಿಷ್ಟ ಪಂಗಡಕ್ಕೆ 8 ಪ್ರಾತಿನಿಧ್ಯವಿರಬೇಕು. ಉಳಿಕೆ ವೃಂದದಲ್ಲಿ ಪರಿಶಿಷ್ಟ ಜಾತಿಗೆ 135 ಮತ್ತು ಪರಿಶಿಷ್ಟ ಪಂಗಡಕ್ಕೆ 55 ಪ್ರಾತಿನಿಧ್ಯವಿರಬೇಕು.
ಅದೇ ರೀತಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ: 13-05-2026ರನ್ವಯ ನೇರ ನೇಮಕಾತಿ ಕೋಟಾದ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಪರಿಶಿಷ್ಟ ಜಾತಿಗೆ 6 ಮತ್ತು ಪರಿಶಿಷ್ಟ ಪಂಗಡಕ್ಕೆ 1 ಪ್ರಾತಿನಿಧ್ಯವಿರಬೇಕು. ಉಳಿಕೆ ವೃಂದದಲ್ಲಿ ಪರಿಶಿಷ್ಟ ಜಾತಿಗೆ 40 ಮತ್ತು ಪರಿಶಿಷ್ಟ ಪಂಗಡಕ್ಕೆ 8 ಪ್ರಾತಿನಿಧ್ಯವಿರಬೇಕು.
</td></tr>
</table>

(ಆ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಸಮಾಜ ಕಲ್ಯಾಣ ಇಲಾಖೆಯ ತನಿಖಾ ವರದಿಯಂತೆ 67 ಪರಿಶಿಷ್ಟ ಜಾತಿ 13 ಪರಿಶಿಷ್ಟ ಪಂಗಡದ ಹಿಂಬಾಕಿಯ ಪ್ರಾಂಶುಪಾಲರ ಹುದ್ದೆಗಳನ್ನು ಬಡ್ತಿ ಮುಖಾಂತರ ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಶಾಲಾ ಶಿಕ್ಷಣ ಇಲಾಖೆಯಲ್ಲಿ(ಪದವಿ ಪೂರ್ವ) ನಿವೃತ್ತಿ, ನಿಧನ, ರಾಜಿನಾಮೆ, ಉಪನಿರ್ದೇಶಕರ ಹುದ್ದೆಗೆ ಬಡ್ತಿಯಿಂದ ತೆರವಾಗುವ ಪ್ರಾಂಶುಪಾಲರ ಹುದ್ದೆಗಳನ್ನು 2016 ರಿಂದ 2021ರವರೆಗೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಈ ಕೆಳಕಂಡ ದಿನಾಂಕಗಳಂದು ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ನಡೆಸಲಾಗಿತ್ತು.

| ವರ್ಷ | ಡಿಪಿಸಿ ದಿನಾಂಕ | ಪರಿಗಣಿಸಲಾದ ಉಪನ್ಯಾಸಕರ ಸಂಖ್ಯೆ |
|---|---|---|
| 2016 | 13-10-2016 | 135 |
| 2018 | 12-04-2018 | 224 |
| 2019 | 22-10-2019 | 95 |
| 2020 | 17-08-2020 | 306 |
| 2021(1) | 14-07-2021 | 43 |
| 2021(2) | 28-10-2021 | 102 |

2016, 2018, 2019 ಮತ್ತು 2021 (1) ಮತ್ತು (2)ರ ಬಡ್ತಿ ಸಂದರ್ಭದಲ್ಲಿ ಮುಂಬಡ್ತಿ ನೀಡುವ ಹುದ್ದೆಗಳು ಒಳಗೊಂಡಂತೆ, ವೃಂದದ ಕಾರ್ಯ ನಿರತ ವೃಂದ ಬಲವನ್ನು ಪರಿಗಣನೆಗೆ ತೆಗೆದುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಪ್ರಮಾಣ (ಪ್ರಾತಿನಿಧ್ಯ) ಕ್ರಮವಾಗಿ ಶೇಕಡ 15 ಮತ್ತು ಶೇಕಡ 3 ಕ್ಕಿಂತ ಹೆಚ್ಚುವರಿಯಾಗಿ ಇರುವುದರಿಂದ ಮುಂಬಡ್ತಿಯಲ್ಲಿ ಮೀಸಲಾತಿ ರೋಸ್ಟರನ್ನು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 1997 ದಿನಾಂಕ: 03.02.1999 ರನ್ವಯ ಕ್ರಮಕ್ಕೈಗೊಳ್ಳಲಾಗಿದೆ.

2020 ಮತ್ತು 2021 [(1) ಮತ್ತು (2)] ಬಡ್ತಿ ಸಂದರ್ಭದಲ್ಲಿ ಮುಂಬಡ್ತಿ ನೀಡುವ ಹುದ್ದೆಗಳನ್ನೊಳಗೊಂಡಂತೆ, ವೃಂದದ ಕಾರ್ಯ ನಿರತ ವೃಂದ ಬಲವನ್ನು ಪರಿಗಣನೆಗೆ ತೆಗೆದುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಪ್ರಮಾಣ (ಪ್ರಾತಿನಿಧ್ಯ) ಕ್ರಮವಾಗಿ ಶೇಕಡ 15 ಮತ್ತು ಶೇಕಡ 3ಕ್ಕೆ ಕೊರತೆ ಇರುವುದರಿಂದ ಮುಂಬಡ್ತಿಯಲ್ಲಿ ಮೀಸಲಾತಿ ರೋಸ್ಟರನ್ನು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ರೋಸ್ಟರನ್ನು ಪಾಲನೆ ಮಾಡಿ ಬಡ್ತಿ ನೀಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆರವರು ತನಿಖೆ ಕೈಗೊಂಡು ದಿನಾಂಕ:07.07.2023ರಲ್ಲಿ ನೀಡಿರುವ ತಪಾಸಣಾ ವರದಿಯಲ್ಲಿ, 80 ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ ಅನುಪಾಲನಾ ವರದಿಯನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ನಿಯಮಗಳು 1992ರ ಸೆಕ್ಷನ್ 10(2) ರನ್ವಯ ಸಲ್ಲಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿರುತ್ತಾರೆ.

| | | |
|---|---|---|
| | | ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಮುಂಬಡ್ತಿಯನ್ನು ನೀಡುವಾಗ ಮೀಸಲಾತಿಯನ್ವಯ ರೋಸ್ಟರ್ ಬಿಂದುಗಳನ್ನು ಉಲ್ಲಂಘಿಸಿರುವುದಾಗಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:207-227/2020ನ್ನು ಶ್ರೀ ಚಂದ್ರಪ್ಪ ಎ ಕೆ ಹಾಗೂ 82 ಉಪನ್ಯಾಸಕರು ಸೇರಿ ದಾಖಲಿಸಿದ್ದರು. ಸದರಿ ಅರ್ಜಿಯನ್ನು ಪರಿಶೀಲಿಸುವಾಗ ದಿನಾಂಕ:07.07.2023 ರಂದು, ಸಮಾಜ ಕಲ್ಯಾಣ ಇಲಾಖೆರವರು ನೀಡಿರುವ ತಪಾಸಣಾ ವರದಿಯನ್ನು ಸಹ ಪರಿಗಣಿಸಿ, ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ದಿನಾಂಕ:14-08-2023ರಂದು ವಜಾಗೊಳಿಸಿರುತ್ತದೆ (the application is dismissed as being devoid of any merit.) ಈ ತೀರ್ಪಿನ ಮೇಲೆ ಅರ್ಜಿದಾರರು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.<br><br>ಶಾಲಾ ಶಿಕ್ಷಣ ಇಲಾಖೆಯಲ್ಲಿನ ಉಪನ್ಯಾಸಕರ ವೃಂದದಿಂದ ಪ್ರಾಂಶಪಾಲರ ವೃಂದಕ್ಕೆ ಮುಂಬಡ್ತಿ ನೀಡುವಲ್ಲಿ ಉಂಟಾಗಿರುವ ಬ್ಯಾಕ್‌ಲಾಗ್ ಹುದ್ದೆಗಳು ಮತ್ತು ಮೀಸಲಾತಿ ರೋಸ್ಟರ್ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಚರ್ಚಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆರವರು ಅಂತಿಮವಾಗಿ 02 ಅಂಶಗಳಲ್ಲಿ ವಿವರಿಸಿರುವಂತೆ ಕ್ರಮಕೈಗೊಳುವಂತೆ ತಿಳಿಸಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಅಂಶಗಳಲ್ಲಿ ವಿವರಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 22 ಎಸ್‌ಬಿಸಿ 1979 ದಿನಾಂಕ:30-08-1979ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 21 ಎಸ್‌ಬಿಸಿ 1997 ದಿನಾಂಕ:03-02-1999ರನ್ವಯ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಗಳನ್ವಯ ಉಪನ್ಯಾಸಕರ ವೃಂದದಿಂದ ಪ್ರಾಂಶಪಾಲರ ವೃಂದಕ್ಕೆ ಮುಂಬಡ್ತಿ ನೀಡುವಾಗ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ನಿರ್ಣಯಿಸಿ, ಕ್ರಮಕೈಗೊಳ್ಳಲಾಗಿದ್ದು, ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಇರುವುದಿಲ್ಲವೆಂದು ಖಚಿತಪಡಿಸಿಕೊಂಡು,, ದಿನಾಂಕ: 12-03-2024ರಂದು ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡಾವಳಿಯನ್ವಯ ಈಗಾಗಲೇ 287 ಹುದ್ದೆಗಳಿಗೆ ಸರ್ಕಾರದ ಇಪಿ 01 ಡಿಜಿಡಿ 2024, ದಿ:15-05-2025ರ ಆದೇಶದ ಭಾಗ-(1) ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಪ್ರಾದೇಶಿಕ ರಾಜ್ಯವ್ಯಾಪಿ ಸ್ಥಳೀಯ ವೃಂದದ ಉಪನ್ಯಾಸಕರಿಗೆ ಹಾಗೂ ಭಾಗ-(2)ರಲ್ಲಿ ಇತರೆ ಉಳಿಕೆ ಮೂಲ ವೃಂದದ ಉಪನ್ಯಾಸಕರಿಗೆ ರೂ.90,200-1,59,200 ವೇತನ ಶ್ರೇಣಿಯ ಪ್ರಾಂಶುಪಾಲರ ವೃಂದದ ಹುದ್ದೆಗೆ ಸ್ಥಾನಪನ್ನ ಬಡ್ತಿ |

| | | |
|---|---|---|
| | | ನೀಡಿ, ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿಯನ್ನು ಮಾಡಲು ಆದೇಶಿಸಲಾಗಿದೆ.<br><br>ಪ್ರಸ್ತುತ ಬಡ್ತಿ ಕೋಟಾದಡಿ ಖಾಲಿ ಇರುವ ಹಾಗೂ ಮುಂದಿನ ಆರು ತಿಂಗಳಲ್ಲಿ ಖಾಲಿಯಾಗಲಿರುವ ಪ್ರಾಂಶುಪಾಲರ ಹುದ್ದೆಗಳಿಗೆ ಅರ್ಹ ಉಪನ್ಯಾಸಕರನ್ನು ಪರಿಗಣಿಸುವ ಸಲುವಾಗಿ, ಅರ್ಹ ಉಪನ್ಯಾಸಕರಿಂದ ಕಾರ್ಯನಿರ್ವಹಣಾ ವರದಿ (CR) ಹಾಗೂ ಅಗತ್ಯ ವ್ಯಕ್ತಿಪೂರ್ವೋತ್ತರ/ಸೇವಾ ದಾಖಲೆಗಳನ್ನು ಆಹ್ವಾನಿಸಿ, ಇಲಾಖಾ ಹಂತದಲ್ಲಿ ಪರಿಶೀಲಿಸಿ ಕ್ರೋಢೀಕರಿಸಲಾಗಿದ್ದು, ಜೇಷ್ಠತಾ ಪಟ್ಟಿಯ ಆಧಾರದ ಮೇಲೆ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022, ದಿನಾಂಕ:28-12-2022ರನ್ವಯ ಸದರಿ ದಾಖಲೆಗಳ ಆಧಾರದ ಮೇಲೆ ಸೇವಾ ಹಿರಿತನ, ಅರ್ಹತೆ, ಮೀಸಲಾತಿ ಹಾಗೂ ರೋಸ್ಟರ್ ಅಂಶಗಳನ್ನು ಪರಿಗಣಿಸಿ, ಉಳಿಕೆ ಮೂಲ ವೃಂದದ 243 ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 65, ಒಟ್ಟು 308 ಉಪನ್ಯಾಸಕರ ವಿವರಗಳು ಮತ್ತು, ಅಗತ್ಯ ದಾಖಲೆಗಳೊಂದಿಗೆ ಪದವಿ ಪೂರ್ವ ಇಲಾಖೆಯಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು ಕುರಿತಂತೆ ಇಲಾಖಾ ಮುಂಬಡ್ತಿ ಸಭೆಯನ್ನು ಆಯೋಜಿಸಿ, ಉಪನ್ಯಾಸಕರು ವೃಂದದಿಂದ ಪ್ರಾಂಶುಪಾಲರು ವೃಂದಕ್ಕೆ ಮುಂಬಡ್ತಿಯನ್ನು ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದು. |
| (ಇ) | ಈ ಬಡ್ತಿಗಳನ್ನು ತಡೆ ಹಿಡಿದ ಅಧಿಕಾರಿಗಳ ಮೇಲೆ ಕೈಗೊಂಡಿರುವ ಶಿಸ್ತು ಕ್ರಮಗಳೇನು? | ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಇಪಿ 244 ಡಿಜಿಡಬ್ಲ್ಯೂ 2026.

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.